ಬಿಡುತ್ತಿದ್ದರೂ, ಶಾಂತಿ ಮಾತ್ರ ತನ್ನಮಗುವಿನ ಖರೀದಿಗಾಗಿ ರಾಯ್ ಅನ್ನೇ ಕಾಯುತ್ತಿದ್ದಳು.

ಹೀಗೊಮ್ಮೆ, ಖರೀದಿಸಿ ಹುತ್ತರಿ ಹಬ್ಬದ ಸಂತಸ ಸಡಗರಗಳಲ್ಲಿ ಮೈ ಮರೆತಿರುವಾಗಲೇ ಅವಳು, 'ರಾಯ್, ನಮ್ಮ ಮನೆ ನಗುನಲಿವುಗಳು ಸದಾ ಹೀಗೇ ಇರಲಿ ಎಂದು ಆಸೆ' ಎಂದು ಆತನ ಕೈ ಬೆರಳುಗಳ ನಡುವೆ ತನ್ನ ಬೆರಳುಗಳನ್ನು ಹೆಣೆದು, ಸ್ಪರ್ಶ ಸುಖದ ಹಿತವನ್ನು ಅನುಭವಿಸುತ್ತಾ ಹೇಳಿದ್ದಳು.

'ಯಾರಿಗೆ ತಾನೇ ಆಸೆ ಇರುವುದಿಲ್ಲ?'

'ಹಾಗಾದರೆ ನೀನು ನನಗೊಂದು ಮಾತು ಕೊಡಬೇಕು.'

'ಏನದು?'

'ನಮ್ಮ ಬಿನ್ನುವನ್ನು ಮಾತ್ರ ಸೈನ್ಯಕ್ಕೆ ಕಳುಹಿಸುವುದು ಬೇಡ'

'ಅವನ ಹಣೆ ಬರಹವೇ ಹಾಗಿದ್ದರೆ?'

'ಆ ಮಾತೆಲ್ಲಾ ಬೇಡ. ಅವನಿಗೆ ಅದರ ನೆರಳೂ ಬೀಳದಂತೆ ಸಾಕಬೇಕು. ಕಾವೇರಮ್ಮೆ ಮೇಲೆ ಆಣೆ......'

'ಸರಿ' ಎಂದು ಕೈ ಮೇಲೆ ಕೈ ಇರಿಸಿ ಹೇಳಿದ್ದ ರಾಯ್.

ಅದೇ ಆತನ ಕೊನೆಯ ಹುತ್ತರಿಯಾಗಬಹುದೆಂದು ಯಾರಿಗಾದರೂ ತಿಳಿದಿತ್ತೇ? ಕಾಶ್ಮೀರದ ಗಡಿಯಿಂದ ಪತ್ರ ಬರೆದಿದ್ದ. 'ಬಹುಶಃ ಸ್ವಲ್ಪ ದಿನ ಪತ್ರ ಬರೆಯಲು ಸಾಧ್ಯವಾಗಲಿಕ್ಕಿಲ್ಲ. ನಾಡು ಬಿಟ್ಟು ಗುಡ್ಡಗಾಡು ಪ್ರದೇಶಕ್ಕೆ ಹೋಗುತ್ತಿದ್ದೇನೆ. ತುರ್ತು ಕರೆ ಬಂದಿದೆ. ಅಲ್ಲಿ ಎಷ್ಟು ದಿನ ಇರಬೇಕೋ ಗೊತ್ತಿಲ್ಲ. ಹಗಲೂ ರಾತ್ರಿ ದೇಶ ರಕ್ಷಣೆಯ ಕೆಲಸ.... ಅಲ್ಲಿ ಮಳೆ ಬೇರೆ ಸುರಿಯುತ್ತಿದೆಯಂತೆ...'

ಆತನ ಪತ್ರ ಬಂದ ನಂತರವಂತೂ ಪ್ರತೀ ಕ್ಷಣವೂ ಆತಂಕ ಉದ್ವೇಗ ವಿಶ್ರಾಂತ ರಹಿತ ಮನಸ್ಸು.....

'ಈ ಹಳ್ಳಿಗಾಡಿನಲ್ಲಿ ರೇಡಿಯೋ ಬಿಟ್ಟರೆ ಬೇರಾವ ಸಂಪರ್ಕ ಸಾಧನಗಳೂ ಇಲ್ಲ. ಈ ಬಾರಿ ಬಂದ ಮೇಲೆ ಟೆಲಿಫೋನ್ ಹಾಕಿಸಲು ಹಣ ಕೊಡುತ್ತೇನ'' ಎಂದು ಹೇಳಿ ಹೋಗಿದ್ದ.

ಕಾಶ್ಮೀರ ಗಡಿಯಲ್ಲಿ ಯುದ್ಧ ನಡೆಯುತ್ತಿತ್ತು. ಶವಗಳ, ಆಕ್ರಂದನಗಳ, ರಕ್ತಪಾತಗಳ ನಡುವೆ ಸೈನಿಕರು ನಿದ್ರಾಹಾರಗಳಿಲ್ಲದೆ ಹೋರಾಡುತ್ತಿದ್ದರು.

ಇತ್ತ ಆತನ ಮನೆಯಲ್ಲೂ ಭಯ, ಕಳವಳದ ವಾತಾವರಣ. ಆಗೊಮ್ಮೆ ಈಗೊಮ್ಮೆ ಎಲ್ಲೆಲ್ಲಿಂದಲೋ ಸೈನಿಕರ ಮರಣದ ಸುದ್ದಿ ಬರುತ್ತಿತ್ತು. ಶಾಂತಿ ಕಂಗಾಲಾಗಿದ್ದಳು.

'ಇಗ್ಗುತಪ್ಪಾ..ನನ್ನ ಒಡೆಯನ ಕಾಪಾಡು...ಕಾವೇರಮ್ಮೆ.. ನನ್ನ ಒಡೆಯನ ಕಾಪಾಡು... ನಿನ್ನಲ್ಲಿಗೆ ಬಂದು ಹಣ್ಣು ಕಾಯಿ ಮಾಡಿಸುತ್ತೇನೆ..'

ದೇವರಲ್ಲಿ ಮೊರೆ...ಹರಕೆಯ ಹೊರೆ ಹೆಚ್ಚುತ್ತಿದ್ದಂತೆ.. ಅತ್ತ ರಾಯ್ ಸಾವಿನ ಸುದ್ದಿ ಬಂದೇ ಬಿಟ್ಟಿತ್ತು.

ತನ್ನ ಹಳವಳಿಸುವಿಕೆಗೆ ಪೂರ್ಣ ವಿರಾಮ ದೊರೆತಿತ್ತು. ಎಲ್ಲರ ಸಾಂತ್ವನ, ಸರಕಾರೀ ಮರ್ಯಾದೆಯೊಂದಿಗೆ ಶವ ಸಂಸ್ಕಾರ, ಪರಿಹಾರ ಧನ, ಇವುಗಳಲ್ಲಿ ಯಾವುದೇ ಒಂದಾದರೂ ತನ್ನ ಮನಸನ್ನು ಅರಳಿಸಲು ಸಾಧ್ಯವಿತ್ತೇ?

ನಂತರದ್ದೆಲ್ಲಾ ನಾಟಕೀಯ ಬೆಳವಣಿಗೆಗಳು. ಪರಿಹಾರ ಧನದ ವಿಚಾರದಲ್ಲಿ ಜಗಳವೇರ್ಪಟ್ಟು ಕುಟುಂಬ ಬೇರೆಯಾಗಿತ್ತು. ಜಮೀನು ಹರಿದು ಹಂಚಿ ಹೋಗಿತ್ತು. ಪಕ್ಕದಲ್ಲೇ ಇದ್ದರೂ ಅತ್ತೆ, ಮಾವ, ಮೈದುನರು ಕಿಡಿಕಾರುತ್ತಿದ್ದರು. ತನಗೆ ದೊರೆತ ಸ್ವಲ್ಪ ಹಣದಲ್ಲಿ ಅವಶ್ಯಕತೆಗಳಿಗೆ ಉಪಯೋಗಿಸಿ, ಉಳಿದುದನ್ನು ಬ್ಯಾಂಕ್ ನಲ್ಲಿಟ್ಟು ಬಡ್ಡಿಯನ್ನು ಖರ್ಚಿಗೆ ಉಪಯೋಗಿಸುತ್ತಿದ್ದಳು.

ರಾಯ್ ನ ದುರ್ಮರಣದೊಂದಿಗೆ ಮನೆ ಮನಸ್ಸು ಚೂರಾಗಿತ್ತು. ನೆಮ್ಮದಿ ಕೆಡಿಸುವಿಕೆಗೆ ಕಾರಣವಾದ ಪಿಸ್ತೂಲ್ ಅನ್ನು ಕಂಡರೆ ಮೈ ಉರಿಯುತ್ತಿತ್ತು. ಹಾಗಾಗಿಯೇ ಆಟಿಕೆಯ ಪಿಸ್ತೂಲಿನಲ್ಲಿ ಆಡುತ್ತಿದ್ದ ಮಗುವಿಗೆ ಹೊಡೆದು, ಪಿಸ್ತೂಲನ್ನು ಕಸಿದಿದ್ದಳು.

ನೆನಪುಗಳ ಸುರುಳಿ ಬಿಚ್ಚಿಕೊಳ್ಳುತ್ತಿದ್ದಂತೆ,ಕಣ್ಣುಗಳು ಮುಚ್ಚಿಕೊಳ್ಳುತ್ತಿದ್ದವು. ಆಲೋಚನೆಗಳು ಅಳಿಸಿಕೊಳ್ಳುತ್ತಿದ್ದವು.

ಮಾರನೇ ದಿನ ಬಿನ್ನು ಶಾಲೆಯಿಂದ ಬಂದೊಡನೆ ಬಟ್ಟೆ ಖರೀದಿಗೆ ಕರೆದೊಯ್ದಳು. ಮಗುವಿನ ಸಂತೋಷಕ್ಕಾಗಿ, ಸಾಂಕೇತಿಕವಾಗಿ ಹಬ್ಬವನ್ನು ಆಚರಿಸಲು ನಿರ್ಧರಿಸಿದಳು.

ಮಗಳ ಮೇಲಿನ ಮಮತೆಯಿಂದ ತವರಿನವರೇ ಹಬ್ಬಕ್ಕಾಗಿ ಮನೆಗೆ ಬಂದಿಳಿದರು. ಭತ್ತದ ತೆನೆಯನ್ನು ಪೂಜಿಸಿ, ಕದಿರು ಕಿತ್ತು `ಪೊಲಿ ಪೊಲಿ ದೇವಾ'ಎಂದು ಹಾಡಿ ಸಂಭ್ರಮಿಸಿದರು. ಬಾಗಿಲಿನ ತೋರಣಕ್ಕೆ ಕದಿರನ್ನು ಅಂದವಾಗಿ ಪೋಣಿಸಿದರು. ಹೊಸ ಅಕ್ಕಿಯ ತಂಬಿಟ್ಟು ತಯಾರಾಗಿತ್ತು. ಮಗು ಪಟಾಕಿ ಹೊಡೆದು ಆನಂದಿಸಿತು.

ಶಾಂತಿ ರಾಯ್ ಅನ್ನು ಕಳೆದುಕೊಂಡು 10 ವರ್ಷಗಳೇ ಕಳೆದು ಹೋದವು. ಬಿನ್ನು 16 ರ ಹರೆಯದ ಯುವಕನಾಗಿದ್ದ. ಆತ, ಅಮ್ಮನ ಬಯಕೆಯಂತೆ ಕೃಷಿ ಪ್ರಧಾನ ವಿಷಯವನ್ನಾಧರಿಸಿದ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಹೋಗಲೇ ಬೇಕಾಗಿತ್ತು. ಸೈನ್ಯವನ್ನು ಹೊರತು ಪಡಿಸಿ ಮಗನನ್ನು ಎಲ್ಲಿಗೂ ಕಳುಹಿಸಲು ತಯಾರಿದ್ದಳು ಶಾಂತಿ. ಅಮ್ಮನ ಮಾತನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ಬಿನ್ನು 'ಅಮ್ಮನ ಮಗನೇ' ಆಗಿದ್ದ.

ಮಗ ಕಲಿಯಲು ಹೊರಗೆ ಹೋಗಿ ಎರಡು ವರ್ಷವಾಗಿತ್ತು. ಪ್ರತೀ ವಾರ ಫೋನ್ ನಲ್ಲಿ ಮಾತುಕತೆಯಾಗುತ್ತಿತ್ತು. ವಾರ ಪೂರ್ತಿ ಆ ಒಂದು ಫೋನ್ ಕರೆಗೆ ಕಾತರಿಸುತ್ತಿದ್ದಳು.

ಮಧ್ಯಾಹ್ನ ಅಂಚೆಯಲ್ಲಿ ದಪ್ಪ ಲಕೋಟೆಯೊಂದು ಬಂತು. ಆತುರದಿಂದ ಒಡೆದಳು. ಬಿನ್ನು ಬರೆದ ಪತ್ರ ಅದಾಗಿತ್ತು.

'ಮಮ್ಮೀ, ಬಹಳ ದಿನಗಳಿಂದ ನಿನಗೆ ಒಂದು ವಿಷಯ ತಿಳಿಸಬೇಕೆಂದಿದ್ದೆ. ಆದರೆ ಅದೇಕೋ ನಿನ್ನ ಮಮತೆ ತುಂಬಿದ ದನಿ ಕೇಳಿದಾಗ ಮಾತೇ ಹೊರಡುತ್ತಿರಲಿಲ್ಲ. ಆದರೆ ಇದೀಗ ಹೇಳಲೇ ಬೇಕಾಗಿದೆ. ಹೇಳುವ ವಿಷಯ ಕೇಳಿ 'ಶಾಕ್' ಆಗುತ್ತದೆಂದು ಗೊತ್ತು. ಆದರೆ.. ನಾನಿರುವ ಹಾಸ್ಟೆಲ್ ಬಳಿ ಮಿಲಿಟರಿ ಕ್ಯಾಂಪಸ್ ಇದೆ. ನನ್ನ ಕೋಣೆಯ ಕಿಟಕಿಯಿಂದ ನೋಡಿದರೆ ಅವರ ಚಟುವಟಿಕೆಗಳು ಕಾಣುತ್ತವೆ. ಬೆಳಿಗ್ಗೆ ಬೇಗ ಎದ್ದು ಕ್ಯಾಂಪಸ್ ನ ಉದ್ದಗಲಕ್ಕೂ ಓಡಾಡುವುದು, ದೇಶ ರಕ್ಷಣೆಯ ಕುರಿತು ಅವರು ತೆಗೆದುಕೊಳ್ಳುವ ಪ್ರತಿಜ್ಞೆ, ಶಿಸ್ತಿನ ಕವಾಯತು.. ಇವೆಲ್ಲ ನನ್ನನ್ನು ಅಯಾಚಿತವಾಗಿ ಅತ್ತ ಸೆಳೆಯುತ್ತಿತ್ತು. ದೇಶ ಪ್ರೇಮದ ಕುರಿತು ಅವರಿಗೆ ನೀಡುತ್ತಿದ್ದ ಉಪನ್ಯಾಸ ಇವುಗಳೆಲ್ಲ ನನ್ನೊಳಗಿನ ಯಾವುದೋ ತುಡಿತವನ್ನು ಬಡಿದೆಬ್ಬಿಸುತ್ತಿದ್ದವು. ನನಗರಿವಿಲ್ಲದೆ ನಾನು ಅಲ್ಲಿ ಆಕರ್ಷಿತನಾದೆ.

ಅಲ್ಲಿಯ ಒಬ್ಬ ಸ್ನೇಹಿತನ ಮೂಲಕ ಈಗ ನಾನು ಅಲ್ಲಿಗೆ ಸೇರುವ ನಿರ್ಧಾರ ಮಾಡಿದ್ದೇನೆ. ದೇಹದಾರ್ಢ್ಯ ಪರೀಕ್ಷೆಗಳೆಲ್ಲ ಮುಗಿದು, ಅದರಲ್ಲಿ ಜಯಶಾಲಿಯಾಗಿದ್ದೇನೆ.

ಮಮ್ಮೀ, ನೀನು ಮಿಲಿಟರಿಯ ನೆರಳೂ ಬೀಳದಂತೆ ಬೆಳೆಸಬೇಕೆಂದು ಬಯಸಿದೆ. ಆದರೆ ಅದೇಕೋ ಸೆಳವಿನಿಂದ ಹಿಂತಿರುಗಲು ಸಾಧ್ಯವಾಗುತ್ತಿಲ್ಲ. ಭಾರತಾಂಬೆಯ ಕುರಿತಾದ ಒಕ್ಕೊರಲಿನ 'ಜಯಕಾರ' ನನ್ನ ಕಿವಿಯಲ್ಲಿ ಝೇಂಕರಿಸಿ, ಮೈ, ಮನಗಳನ್ನು ಪುಳಕಗೊಳಿಸುತ್ತದೆ.

ನಿನಗೆ ನೋವಾಗುತ್ತದೆ, ನಿನ್ನ ನೋವಿಗೆ ಸ್ಪಂದಿಸುತ್ತಿಲ್ಲ ಎನ್ನುವ ಅಪರಾಧೀ ಪ್ರಜ್ಞೆಯೂ ಕಾಡುತ್ತಿದೆ. ಆದರೆ, ಅದಕ್ಕಿಂತಲೂ ಅಪರಾಧೀ ಮನೋಭಾವ ಕಾಡುವುದು, ಭಾರತಾಂಬೆಯ ರಕ್ಷಣೆಯಲ್ಲಿ ನನ್ನ ಕರ್ತವ್ಯ ಏನೂ ಇಲ್ಲವೇ? ಎಂಬ ಯೋಚನೆ ಬಂದಾಗ. ಭಾರತಾಂಬೆ ರಕ್ಷಣೆ ಎನ್ನುವ ಪರಿಧಿಯಲ್ಲಿ ನೀನೂ ಒಳಪಡುತ್ತಿ ಅಲ್ವ ಮಮ್ಮೀ?

ಮಮ್ಮೀ, ನನ್ನನ್ನು ಕ್ಷಮಿಸು. ಈ ಕುರಿತು ಹೆಚ್ಚಿಗೆ ಏನು ಹೇಳಲಿ?

ನೀನು ದಿಟ್ಟ ಕೊಡವತಿ ಅಲ್ವ? ನಾನು ಬಂದು ನಿನ್ನನ್ನು ನೋಡ್ಕೊಂಡು ಹೋಗ್ತೀನಿ. ನನಗೆ ಆಶೀರ್ವಾದ ಮಾಡು'.

ಹಿಡಿದ ಪತ್ರ ಕೈಯಲ್ಲೇ ಇತ್ತು. ಕಲ್ಲಾಗಿ ಕುಳಿತಿದ್ದಳು. ಒಂದು ತೊಟ್ಟು ಕಣ್ಣೀರು ಬಾರದಷ್ಟು ಮನಸ್ಸು ಹೆಪ್ಪುಗಟ್ಟಿತ್ತು. ಮೌನ ಮಡುಗಟ್ಟಿತ್ತು. ಹಿಂದೆ ಪಿಸ್ತೂಲನ್ನು ಎಸೆದಾಗ ಆದ ಉದ್ವಿಗ್ನತೆ ಈಗ ಇರದೆ ಸ್ಥಿರತೆ ಬಂದಿತ್ತು.

ರಾಯ್, 'ನೀನು ದಿಟ್ಟ ಕೊಡವ ಕನ್ಯೆ' ಎಂದಿದ್ದ.

ಬಿನ್ನು, 'ನೀನು ದಿಟ್ಟ ಕೊಡವತಿ' ಎಂದ ಚರಿತ್ರೆ ಮರುಕಳಿಸಿತ್ತು.

ಆ ಕ್ಷಣದಲ್ಲಿ ದುಃಖ ಹಂಚಿಕೊಳ್ಳಲು ಯಾರೂ ಇರಲಿಲ್ಲ.

'ನಾನು ಏಕಾಂಗಿ..... ಏಕಾಂಗಿ.....' ತನ್ನಷ್ಟಕ್ಕೆ ಗೊಣಗಿಕೊಂಡಳು. ಬದುಕು ನಮ್ಮ ಆಯ್ಕೆಯೆ? ಅಥವಾ ವಿಧಿ ಲಿಖಿತವೇ? ದೀರ್ಘ ನಿಟ್ಟುಸಿರಿನೊಂದಿಗೆ ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಳು.